ಕರ್ನಾಟಕ ವಿಧಾನ ಸಭೆ

ಗುರುವಾರ 7ನೇ ಆಗಸ್ಟ್ 2003 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10-51 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ನವರು

ಪೀಠವನ್ನು ಅಲಂಕರಿಸಿದ್ದರು

1. ಅಧ್ಯಕ್ಷರ ಅಪ್ಪಣೆಯ ಮೇರೆಗೆ

ಮದ್ದೂರು ಪಟ್ಟಣದಲ್ಲಿ ಗ್ರಾಮೀಣ ಕೃಪಾಂಕದಿಂದ ನೇಮಕಾತಿಯಾಗಿದ್ದ ಮಹಿಳೆ ರೈಲಿನಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ವಿಚಾರ.

† **ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)** : ಮಾನ್ಯ ಅಧ್ಯಕ್ಷರೆ, ಒಂದು ನಿಲುವಳಿ ಸೂಚನೆಯನ್ನು ನಾನು ಕೊಟ್ಟಿದ್ದೇನೆ. ಮದ್ದೂರು ಪಟ್ಟಣದ ಕೃಪಾಂಕ ನೌಕರಳಾದ ಒಬ್ಬ ಮಹಿಳೆ ರೈಲಿನಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ವಿಚಾರ ಇವತ್ತಿನ ದಿನಪತ್ರಿಕೆಯಲ್ಲಿ ಬಂದಿದೆ. ಅದೇ ರೀತಿ ಮತ್ತೊಂದು ಪತ್ರಿಕೆಯಲ್ಲಿ ಕುಮಟದಲ್ಲಿ ಒಬ್ಬ ಕೃಪಾಂಕ ನೌಕರ ಆತ್ಮಹತ್ಯೆ ಮಾಡಿಕೊಂಡಿರುವುದು ಬಂದಿದೆ. ಇವತ್ತು ಇಡೀ ರಾಜ್ಯದಲ್ಲಿ ಗ್ರಾಮೀಣ ಕೃಪಾಂಕದ....

ಶ್ರೀ ಆರ್.ಎ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ಒಂದು ಮಹತ್ವದ ವಿಷಯದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡುತ್ತಿದ್ದಾರೆ. ಅದಕ್ಕೆ ಉತ್ತರ ಕೊಡಬೇಕಾದರೆ ಸಂಬಂಧಪಟ್ಟ ಮಂತ್ರಿಗಳು ಬರಬೇಕಾಗುತ್ತದೆ. ನನ್ನ ಸಲಹೆ ಏನೆಂದರೆ, ಬಹಳ ಮಹತ್ವದ ವಿಷಯವನ್ನು ಅವರು ರೈಸ್ ಮಾಡಿದ್ದಾರೆ. ಅದು ಬಹಳ ಮಹತ್ವದ ಪ್ರಶ್ನೆ ಆಗಿದೆ. ಆದ್ದರಿಂದ ಅದಕ್ಕೆ ಉತ್ತರ ಕೊಡಬೇಕಾದರೆ ಸಂಬಂಧಪಟ್ಟ ಮಂತ್ರಿಗಳನ್ನು ಕರೆಸುತ್ತೇವೆ. ಆ ತನಕ ಬೇರೆ ವಿಷಯಗಳನ್ನು ತೆಗೆದುಕೊಳ್ಳಿ, ಬಿಲ್ ಅನ್ನು ನಾವು ಇಂಟ್ರಡ್ಯೂಸ್ ಮಾಡುತ್ತೇವೆ. ಮಂತ್ರಿಗಳು ಇಲ್ಲ. ಇದ್ದಾಗ ಹೇಳಿದರೆ ಅವರು ಎನು ಹೇಳುತ್ತಿದ್ದಾರೆಂದು ಗೊತ್ತಾಗುತ್ತದಲ್ಲವೇ?

ಶ್ರೀ ಜಗದೀಶ್ ಶೆಟ್ಟರ್ : ಬೇರೆ ವಿಷಯವನ್ನು ತೆಗೆದುಕೊಂಡರೆ ಆ ಮೇಲೆ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಸಿಗುವುದಿಲ್ಲ. ಇದು ಬಹಳ ಮಹತ್ವದ್ದು ಇದೆ.

ಅಧ್ಯಕ್ಷರು : ಮಾನ್ಯ ದೇಶಪಾಂಡೆಯವರೆ, ಅವರು ಏನು ಹೇಳುತ್ತಾರೆ ಅದನ್ನು ಐದು ನಿಮಿಷ ಹೇಳಲಿ. ಅಷ್ಟೊತ್ತಿಗೆ ಸಂಬಂಧಪಟ್ಟ ಮಂತ್ರಿಗಳು ಬರುತ್ತಾರೆ. ಈಗ ಏಕೆ ಸುಮ್ಮನೆ ಅಡಚಣೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ವಿಷಯವಾಗಿರುವುದರಿಂದ ನಾವು ಈಗಾಗಲೇ ನಿಯಮ 69ರಲ್ಲಿ ನೋಟೀಸ್ ಕೊಟ್ಟಿದ್ದೇವೆ. ನಾಳೆ ಅಧಿವೇಶನದ ಕೊನೆಯ ದಿವಸವಾಗಿದೆ. ಇಡೀ ರಾಜ್ಯದಲ್ಲಿ ಇವತ್ತು ಗ್ರಾಮೀಣ ಕೃಪಾಂಕ ನೌಕರದಾರರಲ್ಲಿ ಒಂದು ರೀತಿಯ ಇನ್‌ಸೆಕ್ಯುರಿಟಿ ಸ್ಟಾರ್ಟ್ ಆಗಿದೆ. ಸುಪ್ರೀಂ ಕೋರ್ಟ್ ನಿರ್ಣಯದ ಬಗ್ಗೆ ಹೈಕೋರ್ಟ್ ನಿರ್ಣಯದ ಬಗ್ಗೆ ನಾನು ಇಲ್ಲಿ ಏನೂ ಪ್ರಸ್ತಾಪ ಮಾಡುವುದಿಲ್ಲ. ಸುಪ್ರೀಂಕೋರ್ಟಿನ ತೀರ್ಪಿನ ಪ್ರಕಾರ ಸುಮಾರು 13 ರಿಂದ 14 ಸಾವಿರ ನೌಕರರಲ್ಲಿ ಈ ತೀರ್ಪಿನಿಂದ 4500 ಕೃಪಾಂಕಿತ ನೌಕರರಿಗೆ

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಇದರ ಪರಿಣಾಮ ಆಗುತ್ತದೆ ಅದನ್ನು ವಜಾ ಮಾಡಬೇಕು ಎನ್ನುವಂಥದ್ದು ಸರ್ಕಾರದ ಒಂದು ಅಬ್ಸರ್ವೇಷನ್ ಅನ್ನು ನಾವು ನೋಡುತ್ತಿದ್ದೇವೆ. ಹೀಗಾಗಿ ಆ ಗ್ರಾಮೀಣ ಕೃಪಾಂಕಿತ ನೌಕರರಲ್ಲಿ ಇನ್‌ಸೆಕ್ಯುರಿಟಿ ಸ್ಟಾರ್ಟ್ ಆಗಿದೆ. ಒಂದು ಹಂತದಲ್ಲಿ ಮಾನ್ಯ ಚಂದ್ರೇಗೌಡರು ಮಾತನಾಡುತ್ತಾ ನಾವು ಅವರಿಗೆ ಎಲ್ಲಾ ರೀತಿಯಾದಂಥ ಸೆಕ್ಯುರಿಟಿ ಕೊಡುತ್ತೇವೆ ಎಂದು ಒಂದು ಕಡೆ ಎಕ್ಸ್‌ಪ್ರೆಸ್ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಕಡೆ ಮಾತನಾಡುತ್ತಾ–

'ಗ್ರಾಮೀಣ ಕೃಪಾಂಕಿತ ನೌಕರರ ರಕ್ಷಣೆಗೆ ನಾವು ಬರುತ್ತೇವೆ. ಅವರ ಸೇವೆಗೆ ಯಾವುದೇ ರೀತಿಯ ಧಕ್ಕೆ ಆಗದ ರೀತಿಯಲ್ಲಿ ನಾವು ನೋಡುತ್ತೇವೆ ಎನ್ನುವ ಭರವಸೆಯನ್ನು ಅವರು ಕೊಟ್ಟರು. ಹೀಗಾಗಿ ನಮ್ಮ ಪ್ರಶ್ನೆ ಏನೆಂದರೆ, ಈಗಾಗಲೇ ಗ್ರಾಮೀಣ ಕೃಪಾಂಕಿತ ನೌಕರರು ಯಾರಿದ್ದಾರೆ ಅವರನ್ನು ವಜಾ ಮಾಡುವಂಥ ಪ್ರೋಸಸ್ ಈಗಾಗಲೇ ಚಾಲೂ ಆಗಿದೆ. ಹೀಗಾಗಿ ಮುಂದೆ ಸರ್ಕಾರದ ನಿರ್ಧಾರವೇನು? ಸರ್ಕಾರ ಅವರ ಸೇವೆಯನ್ನು ಕಂಟಿನ್ಯೂ ಮಾಡಲಿಕ್ಕೆ ಯಾವ ಕ್ರಮವನ್ನು ಕೈಗೊಂಡಿದೆ ಎನ್ನುವಂಥ ವಿಷಯವನ್ನು ಅವರು ಸ್ಪಷ್ಟನೆ ಮಾಡಬೇಕಾಗುತ್ತದೆ. ಇವತ್ತು ಆ ನೌಕರರು ಅತಂತ್ರ ಸ್ಥಿತಿಯಲ್ಲಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರವಾದ ಮದ್ದೂರಿನಲ್ಲಿ ಎಂ.ಕಾಂ., ಬಿ.ಬಿ.ಎಂ. ಮಾಡಿ ಗ್ರಾಮೀಣ ಕೃಪಾಂಕದಲ್ಲಿ ಕೆಲಸಕ್ಕೆ ಸೇರಿ ಟೈಪಿಸ್ಟ್ ಕೆಲಸ ಮಾಡುತ್ತಿದ್ದಂಥ ಒಬ್ಬಳು ಯುವತಿ ಕೆಲಸದಿಂದ ವಜಾ ಮಾಡಿದರೆಂದು ರೈಲಿನಿಂದ ನದಿಗೆ ಜಿಗಿದು ಆತ್ಮಹತ್ಯೆ ಮಾಡಿಕೊಂಡಿರುವುದು ಪತ್ರಿಕೆಯಲ್ಲಿ ಬಂದಿರುವಂಥದ್ದು ನಮ್ಮ ಮುಂದೆ ಇದೆ. ಇತ್ತೀಚೆಗೆ ಒಬ್ಬ ಶಿಕ್ಷಕಿ ಭಟ್ಕಳದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವುದು ನಮ್ಮ ಕಣ್ಣು ಮುಂದೆ ಇದೆ. ಇಡೀ ರಾಜ್ಯದ ಬೇರೆ ಬೇರೆ ಭಾಗದಲ್ಲಿ ಈ ವಿಷಯದ ಸಲುವಾಗಿ ಚಳುವಳಿ ಮುಂತಾದವು ನಡೆಯುತ್ತಿದೆ. ಅದಕ್ಕಾಗಿ ಈ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿಲುವು ಏನು ಎನ್ನುವುದನ್ನು ಹೇಳಬೇಕು. ಇಲ್ಲಿ ಒಂದೆರಡು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಚಂದ್ರೇಗೌಡರು– 'ಕೃಪಾಂಕ ನೌಕರರ ಮರುನೇಮಕ ಇನ್ನೆರಡು ತಿಂಗಳಲ್ಲಿ ಪೂರ್ಣ' ಎನ್ನುವಂಥ ಮಾತನ್ನು ಹೇಳಿದರು. ಅದರ ಬಗ್ಗೆ ಮುಂದೆ ಏನಾಯಿತು ಎನ್ನುವಂಥದ್ದು ಗೊತ್ತಾಗಲಿಲ್ಲ. ಆ ಮೇಲೆ ಕೃಪಾಂಕಿಗಳ ಮರುನೇಮಕ ಪ್ರಕ್ರಿಯೆ ಆರಂಭ. ಎನ್ನುವಂಥ ಮಾತನ್ನು ಹೇಲಿದರು. ಪುನಃ ಒಂದು ಹಂತದಲ್ಲಿ ಮಾನ್ಯ ಚಂದ್ರೇಗೌಡರು ಸರ್ಕಾರ ಪತನವಾದರೂ ಅಡ್ಡಿಯಿಲ್ಲ. ಕೃಪಾಂಕ ನೌಕರರ ಹಿತರಕ್ಷಣೆಗೆ ಬದ್ಧ ಎಂದು ಚಿಕ್ಕಮಗಳೂರಿನಲ್ಲಿ ಒಂದು ಪ್ರೆಸ್ ಮೀಟ್‌ನಲ್ಲಿ ಹೇಳಿದರು. ಸರ್ಕಾರ ಪತನ ಎಂದು ಏಕೆ ಹೇಳಿದರೆಂದರೆ, ಒಂದು ವೇಳೆ ನಾಳೆಯ ದಿವಸ ಕೃಪಾಂಕ ನೌಕರರನ್ನು ಉಳಿಸಿಕೊಂಡು ಕಂಟಿನ್ಯೂ ಮಾಡಿದರೆ ಸುಪ್ರೀಂ ಕೋರ್ಟ್ ಮುಂದೆ ಕಂಟೆಫ್ಟ್ ಆಫ್ ಕೋರ್ಟ್ ಇವೆಲ್ಲಾ ಆಗಬಹುದು. ಹೀಗಾಗಿ ಸರ್ಕಾರ ಪತನವಾದರೂ ಅಡ್ಡಿಯಿಲ್ಲ. ಇವರ ರಕ್ಷಣೆಗೆ ನಾನು ಬರುತ್ತೇನೆ ಎನ್ನುವಂಥ ಮಾತನ್ನು ಮಾನ್ಯ ಚಂದ್ರೇಗೌಡರು ಹೇಳಿದರು. ಹಾಗಾಗಿ ಇಲ್ಲಿಯವರೆಗೆ ಆ ಭರವಸೆ ಏನಾಯಿತು? ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಮತ್ತೊಂದು ಕಡೆ ಇವರ ರಕ್ಷಣೆಗಾಗಿ ಹೊಸ ಕಾನೂನನ್ನು ನಾವು ತರುತ್ತೇವೆ ಎಂದು ಹೇಳಿದರು. ಅದರ ಬಗ್ಗೆಯೂ ಇನ್ನೂ ಕೂಡ ಏನೂ ಗೊತ್ತಾಗಿಲ್ಲ. ಹಾಗೆಯೇ ಕೃಪಾಂಕಿತರ ಮರು ನೇಮಕಕ್ಕೆ ವಿಶೇಷ ನಿಯಮವನ್ನು ರೂಪಿಸಲು ಪರಿಶೀಲನೆ ಎಂದು ಒಂದು ಕಡೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಹಾಗೆಯೇ ರಾಜ್ಯದ ಮುಖ್ಯ ಕಾರ್ಯದರ್ಶಿಯವರು – 'ಈ ಕೃಪಾಂಕಿತ ನೌಕರರ ಬದಲು ಉಳಿದವರನ್ನು ನಾವು ಪುನರ್‌ನೇಮಕ ಮಾಡಲಿಕ್ಕೆ ಅಂದರೆ ಇವರನ್ನೆಲ್ಲಾ ವಜಾ ಮಾಡಿ

ಬೇರೆ ಅಭ್ಯರ್ಥಿಗಳನ್ನು ತೆಗೆದುಕೊಳ್ಳಲಿಕ್ಕೆ ನಮ್ಮ ಪ್ರಯತ್ನ ಪ್ರಾರಂಭವಾಗಿದೆ. ಎನ್ನುವಂಥ ಹೇಳಿಕೆಯನ್ನು ಪತ್ರಿಕೆಗೆ ಕೊಟ್ಟಿದ್ದಾರೆ. ಹೀಗಾಗಿ ಆ ಗ್ರಾಮೀಣ ಕೃಪಾಂಕಿತ ನೌಕರರಲ್ಲಿ ಇನ್‌ಸೆಕ್ಯುರಿಟಿ ಪ್ರಾರಂಭವಾಗಿದೆ. ಒಂದು ಕಡೆ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಬಿ.ಎಸ್. ಪಾಟೀಲರು ಹೇಳುವಂಥದ್ದು, ಮಾನ್ಯ ಚಂದ್ರೇಗೌಡರು, ಮಾನ್ಯ ಮುಖ್ಯಮಂತ್ರಿಗಳು ಇನ್ನೊಂದು ಕಡೆ ಹೇಳುವಂಥದ್ದು. ಹೀಗಾಗಿ ಈ ಆತ್ಮಹತ್ಯೆ ಪ್ರಕರಣಗಳು ಜಾಸ್ತಿ ಆಗುವಂಥದ್ದು ಇದೆ. ಅದಕ್ಕಾಗಿ ಸರ್ಕಾರ ಅವರ ರಕ್ಷಣೆಗೆ ಬರಬೇಕು. ಒಂದು ಕಡೆ ಮಾನ್ಯ ಚಂದ್ರೇಗೌಡರು – 'ಪ್ರತಿಪಕ್ಷಗಳು ಸಲಹೆ ಸೂಚನೆಗಳನ್ನು ಕೊಡಿ ಎಂದು ಹೇಳಿದರು. ನಾವು ಏನು ಹೇಳುತ್ತೇವೆಂದರೆ – 'ಅವರ ರಕ್ಷಣೆಗೆ ಹೊಸ ಕಾನೂನನ್ನು ತೆಗೆದುಕೊಂಡು ಬನ್ನಿ, ಅದಕ್ಕೆ ಸಂಪೂರ್ಣವಾದಂಥ ಪ್ರತಿಪಕ್ಷದವರಾದ ಬೆಂಬಲವನ್ನು ನಾವು ಕೊಡಲಿಕ್ಕೆ ತಯಾರಿದ್ದೇವೆ. ಆ ಗ್ರಾಮೀಣ ಕೃಪಾಂಕಿತ ನೌಕರರ ರಕ್ಷಣೆ ಮಾಡುವಂಥದ್ದು, ಅವರ ಸೇವೆಯನ್ನು ಮುಂದುವರಿಸಬೇಕೆನ್ನುವಂಥ ನಮ್ಮ ಪಕ್ಷದ ನಿಲುವು ಇದೆ. ನಾವು ಎಲ್ಲಾ ರೀತಿಯ ಸಹಕಾರ ಮತ್ತು ಬೆಂಬಲವನ್ನು ಸರ್ಕಾರಕ್ಕೆ ಕೊಡುವುದಕ್ಕೆ ತಯಾರಿದ್ದೇವೆ. ಹೀಗಾಗಿ ಸರ್ಕಾರ ಒಮದು ಹೊಸ ಕಾನೂನನ್ನು ತೆಗೆದುಕೊಂಡು ಬರಲಿ. 'ನಾವು ಲಿಗಲ್ ಎಕ್ಸ್‌ಪರ್ಟ್ಸ್‌ನ ಒಪೀನಿಯನ್ ತೆಗೆದುಕೊಂಡಿದ್ದೇವೆ. ಅದರ ಪ್ರಕಾರ ಒಂದು ಹೊಸ ಕಾನೂನು ಅನ್ನು ಮಾಡಲಿಕ್ಕೆ ಬರುತ್ತದೆ. ಎನ್ನುವಂಥ ಮಾತನ್ನು ಮಾನ್ಯ ಚಂದ್ರೇಗೌಡರು ಹೇಳಿದ್ದಾರೆ. ಒಂದು ಮಾನವೀಯ ದೃಷ್ಟಿಯಿಂದ ಒಂದು ರಿವಿಷನ್ ಪಿಟಿಷನ್ ಫೈಲ್ ಮಾಡಿ ಎಂದು ಹೇಳಿದ್ದೆವು. ಹೈಕೋರ್ಟ್‌ನಲ್ಲಿ ಆದಂಥ ಜಡ್ಜ್‌ಮೆಂಟ್ ಮತ್ತು ಸುಪ್ರೀಂಕೋರ್ಟ್‌ನಲ್ಲಿ ಆದಂಥ ಜಡ್ಜ್‌ಮೆಂಟ್ ಆ ಮಧ್ಯೆ ಏನು ವೇಳೆ ಇದೆ ಆ ವೇಳೆಯಲ್ಲಿ ಇವೆಲ್ಲಾ ಅಪಾಯಿಂಟ್‌ಮೆಂಟ್ ಆಗಿರುವಂಥದ್ದು. ಸರ್ಕಾರ ಏನು ಮಾಡಿತು. ಸರ್ಕಾರ ತಪ್ಪು ಮಾಡಿದೆಯೇ ಇಲ್ಲವೇ ಎನ್ನುವ ಆ ಹಿನ್ನೆಲೆಯ ಚರ್ಚೆಗೆ ನಾನು ಹೋಗುವುದಿಲ್ಲ. ಇವತ್ತಿನ ಅವರ ಸಮಸ್ಯೆ ಏನಿದೆ ಅದರಂತೆ ಅವರಿಗೆ ನಾವು ಸೇವಾ ಭದ್ರತೆಯನ್ನು ಕೊಡಬೇಕಾಗಿದೆ. ಹೀಗಾಗಿ ಸರ್ಕಾರ ತಪ್ಪು ಮಾಡಿದ ಬಗ್ಗೆ, ಸರ್ಕಾರ ಕೋರ್ಟ್‌ನಲ್ಲಿ ವಿಫಲವಾದ ಬಗ್ಗೆ ನಾನು ಹೆಚ್ಚಿಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಸರ್ಕಾರ ಅವರ ರಕ್ಷಣೆಗೆ ಬರಲಿ. ಸರ್ಕಾರ ಅವರ ರಕ್ಷಣೆಗೆ ಬರುವಂಥ ಏನು ಕಾನೂನು ಕ್ರಮಗಳನ್ನು ಕೈಗೊಳ್ಳುತ್ತಾರೆ ಅದಕ್ಕೆಲ್ಲಾ ಸಂಪೂರ್ಣವಾದಂಥ ಸಹಕಾರವನ್ನು ಕೊಡಲಿಕ್ಕೆ ಪ್ರತಿಪಕ್ಷದವರಾದ ನಾವು ತಯಾರಿದ್ದೇವೆ. ಮತ್ತು ತಾವು ಚರ್ಚೆಗೆ ಅನುಮತಿ ಕೊಟ್ಟರೆ ಇನ್ನು ಉಳಿದ ವಿಷಯಗಳನ್ನು ನಾವು ಡೀಟೈಲ್ ಆಗಿ ಚರ್ಚೆ ಮಾಡಲಿಕ್ಕೆ ತಯಾರಿದ್ದೇವೆ. ಆದರೆ ಇವತ್ತು ಪ್ರಾಥಮಿಕ ಹಂತದಲ್ಲಿ ನಾನು ಹೇಳುವುದೇನೆಂದರೆ, ಗ್ರಾಮೀಣ ಕೃಪಾಂಕಿತ ನೌಕರರ ಸೇವೆ ಭದ್ರತೆಯ ಸಲುವಾಗಿ ಖಾಯಂಗೊಳಿಸುವುದಕ್ಕೆ ಏನು ಮಾಡಬೇಕೆನ್ನುವಂಥದ್ದು, ಹೊಸ ಕಾನೂನನ್ನು ತರುವಂಥಾದ್ದು ಇರಬಹುದು ಅಥವಾ ಕಾಂಟ್ರಾಕ್ಟ್ ಬೇಸಿಸ್ ಮೇಲೆ ತರುವಂಥದ್ದು ಇರಬಹುದು. ಅಥವಾ ಹೊಸದಾಗಿ ನಿಯಮಾವಳಿಗಳನ್ನು ಯೂಸ್ ಮಾಡುವಂಥದ್ದು ಇರಬಹುದು ಅಥವಾ ತಕ್ಷಣ ಸುಪ್ರೀಂ ಕೋರ್ಟಿಗೆ ರಿವಿಷನ್ ಪಿಟಿಷನ್ ಸಲ್ಲಿಸುವುದು ಇರಬಹುದು. ಈ ರೀತಿಯ ಪ್ರಕ್ರಿಯೆಗಳನ್ನೆಲ್ಲಾ ಏನು ಮಾಡುತ್ತೀರಿ ಅದಕ್ಕೆಲ್ಲಾ ಸಂಪೂರ್ಣವಾಧ ಬೆಂಬಲವನ್ನು ಕೊಡಲಿಕ್ಕೆ ನಾವು ತಯಾರಿದ್ದೇವೆ. ಅದಕ್ಕೆ ಸರ್ಕಾರ ಮುಂದೆ ನಿಂತು ಈ ಬಗ್ಗೆ ಒಂದು ನಿರ್ಣಯವನ್ನು ಕೈಗೊಳ್ಳಬೇಕಾಗುತ್ತದೆ. ಈಗ ಏನಾಗಿದೆ ಎಂದರೆ ಈಗ ಯಾರನ್ನು ವಜಾ ಮಾಡುತ್ತಿದ್ದಾರೆ ವಜಾ ಮಾಡಿದವರ ಸ್ಥಳದಲ್ಲಿ ಅವರ ಹಿಂದೆ ಮೆರಿಟ್‌ನಲ್ಲಿ ಯಾರಿದ್ದಾರೆ ಅವರನ್ನು ಫಿಲ್‌ಅಪ್ ಮಾಡುವಂಥ

ಪ್ರಕ್ರಿಯೆ ಇವತ್ತು ನಡೆಯುತ್ತಿದೆ. 4600 ಜನರನ್ನು ಒಂದು ಕಡೆಯಿಂದ ವಜಾ ಮಾಡುತ್ತಿದ್ದಾರೆ. ವಜಾ ಮಾಡಿ ಅವರ ಪ್ಲೇಸ್‌ನಲ್ಲಿ ಆ ಒಂದು ಸಂದರ್ಶನದಲ್ಲಿ ಅವರ ಹಿಂದೆ ಯಾರು ಮೆರಿಟ್ ಅಭ್ಯರ್ಥಿ ಇದ್ದಾರೆ ಅವರನ್ನು ನೀವು ನೇಮಕ ಮಾಡುವಂಥ ಪ್ರವೃತ್ತಿ, ಪ್ರಕ್ರಿಯೆ ಪ್ರಾರಂಭವಾಗಿದೆ. ಹೀಗಾಗಿ 4600 ಅಭ್ಯರ್ಥಿಗಳನ್ನು ವಜಾ ಮಾಡಿ ಆ ಹುದ್ದೆಗೆ ಮತ್ತೊಬ್ಬರನ್ನು ನೇಮಕ ಮಾಡಿದರೆ ಮುಂದೆ ಇವರಿಗೆ ಎಲ್ಲಿ ಅವಕಾಶ ಕೊಡುತ್ತೀರಿ? ಇದೂ ಕೂಡ ಒಂದು ಪ್ರಶ್ನೆಯಾಗಿ ಬರುತ್ತದೆ. ಹಾಗೆಯೇ ಇಲ್ಲಿ ಸೀಮಿಯಾರಿಟಿ ಪ್ರಶ್ನೆ ಕೂಡ ಬರುತ್ತದೆ ಅಲ್ಲವೇ? ಇವೆಲ್ಲ ಬಹಳ ಗೊಂದಲ ನಿರ್ಮಾಣವಾಗುವಂಥದ್ದು ಇದೆ. ಅದಕ್ಕೋಸ್ಕರ– 'ನಿಮ್ಮ ಸೇವೆಗೆ ನಾವು ಭದ್ರತೆ ಕೊಡುತ್ತೇವೆ. ಇಂಥ ಅವಧಿಯೊಳಗಾಗಿ' ನಾವು ಮಾಡುತ್ತೇವೆ. ನಿಮ್ಮನ್ನು ವಜಾ ಮಾಡಿದರೂ ಅಥವಾ ವಜಾ ಪ್ರಕ್ರಿಯೆ ಆದರೂ ತಕ್ಷಣವೇ ನಿಮ್ಮನ್ನು ನೇಮಕ ಮಾಡುತ್ತೇವೆ. ಅನ್ನುವಂಥದ್ದರ ಬಗ್ಗೆ ಒಂದು ಸ್ಪಷ್ಟವಾದ ಭರವಸೆಯನ್ನು ಸರ್ಕಾರ ಕೊಡಬೇಕು. ಸ್ಪಷ್ಟವಾದ ನಿಲುವನ್ನು ಹೇಳಬೇಕು. ಈ ರೀತಿ ಹೇಳಿದಾಗ ಮಾತ್ರ ಈ ಆತ್ಮಹತ್ಯೆ ಪ್ರಕರಣಗಳು ನಿಲ್ಲುವುದಕ್ಕೆ ಸಾಧ್ಯ. ರೈತರು ಆತ್ಮಹತ್ಯೆ ಮಾಡಿಕೊಳ್ಳುವಂಥದ್ದು, ಈಗ ನೌಕರರು ಆತ್ಮಹತ್ಯೆ ಮಾಡಿಕೊಳ್ಳುವಂಥ ಪರಿಸ್ಥಿತಿ ಈ ಸರ್ಕಾರದಲ್ಲಿ ನಿರ್ಮಾಣವಾಗಿದೆ. ಇದಕ್ಕೆ ಸರ್ಕಾರ ಒಂದು ದಿಟ್ಟ ನಿಲುವನ್ನು ತೆಗೆದುಕೊಳ್ಳಬೇಕು. ಅದಕ್ಕೆ ನಮ್ಮ ಎಲ್ಲಾ ಬೆಂಬಲ ಇದೆ ಎಂದು ಹೇಳಿ, ಸರ್ಕಾರ ಇದಕ್ಕೆ ಸ್ಪಷ್ಟವಾದಂಥ ಉತ್ತರ ಕೊಡಬೇಕೆಂದು ತಮ್ಮ ಮುಖಾಂತರ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

† **ಶ್ರೀ ಬಿ. ಸೋಮಶೇಖರ್ (ಮಳವಳ್ಳಿ)** : ಮಾನ್ಯ ಅಧ್ಯಕ್ಷರೆ, ಇವತ್ತಿನ ಒಂದು ಪತ್ರಿಕೆಯ ವರದಿಯನ್ನು ನೋಡಿ ಬಹಳ ಗಾಬರಿಯಾಯಿತು. ಈಗಾಗಲೇ ಗ್ರಾಮೀಣಾ ಕೃಪಾಂಕದ ವಿಚಾರದಲ್ಲಿ ನಾವೂ ಸಹ ನಿಯಮ 69ರ ಅಡಿಯಲ್ಲಿ ಒಂದು ಸೂಚನೆಯನ್ನು ಕೊಟ್ಟಿದ್ದೆವು. ಅದು ಇನ್ನು ಚರ್ಚೆಗೆ ಬಂದಿಲ್ಲ. ಈ ನಡುವೆ ಇವತ್ತು ಗ್ರಾಮೀಣಾ ಕೃಪಾಂಕದ ಅಡಿಯಲ್ಲಿ ನೇಮಕವಾಗಿದ್ದಂಥ ಒಬ್ಬ ಹೆಣ್ಣುಮಗಳು, ಅದರಲ್ಲೂ ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ಅಭ್ಯರ್ಥಿ ಈ ಸರ್ಕಾರದ ಧೋರಣೆಯನ್ನು ನೋಡಿ, ಹತಾಶಳಾಗಿ ಇನ್ನೂ ನನಗೆ ಭವಿಷ್ಯವೇ ಇಲ್ಲವೆಂದು ರೈಲಿನಲ್ಲಿ ಹೋಗತಕ್ಕಂಥ' ಸಂದರ್ಭದಲ್ಲಿ ನದಿಗೆ ಜಿಗಿದು ಪ್ರಾಣ ಕಳೆದುಕೊಂಡಿರತಕ್ಕಂಥದ್ದು, ನೋಡಿದ್ದೇವೆ. ಮಾನ್ಯ ಕೃಷ್ಣಪ್ಪನವರೇ ಇದು ನಗತಕ್ಕಂಥ ವಿಚಾರವಲ್ಲ. ನಿಜವಾಗಲೂ ಬಹಳ ದುಃಖವಾದ ವಿಚಾರ.

ಶ್ರೀ ಎ. ಕೃಷ್ಣಪ್ಪ : ನಾನು ನಗುತ್ತಿಲ್ಲ. ನಗುವ ಹಾಗೆ ಕಾಣುತ್ತೇನೆ. ನನ್ನದು ಯಾವಾಗಲೂ ನಗು ಮುಖ.

ಶ್ರೀ ಬಿ. ಸೋಮಶೇಖರ್ : ಈ ವಿಚಾರ ಕೇಳುವಾಗ ನಗುಮುಖ ಇರಬಾರದು, ಅದು ಮಾನವೀಯತೆ ದೃಷ್ಟಿ. ಮಾನ್ಯ ಸಭಾಧ್ಯಕ್ಷರೆ, ತಮಗೆ ಗೊತ್ತಿದ್ದ ಹಾಗೆ ಈ ಒಂದು ಗ್ರಾಮೀಣಾ ಕೃಪಾಂಕದಡಿಯಲ್ಲಿ ಸುಮಾರು 16,700 ಅಭ್ಯರ್ಥಿಗಳು ವಿವಿಧ ಇಲಾಖೆಗಳಲ್ಲಿ ನೇಮಕವಾಗಿ ಸುಮಾರು 5–6 ವರ್ಷಗಳ ಕಾಲ ಕೆಲಸದಲ್ಲಿದ್ದರು. ಅವರು ಪ್ರೊಬೆಷನರಿ ಪಿರೀಯೆಡ್ ಮುಗಿಸಿದ್ದಾರೆ. ಕೆಲವು ಸಬ್ ಇನ್ಸ್‌ಪೆಕ್ಟರ್‌ಗಳು ಅವರು ಎರಡು ಮೂರು ವರ್ಷಗಳ ಕಾಲ ಕೆಲಸವನ್ನು ಸ್ಟೇಷನ್‌ಗಳಲ್ಲಿ ಮಾಡುತ್ತಿದ್ದರು. ಟೀಚರ್ಸ್ ಅವರೆಲ್ಲರೂ ಸುಮಾರು ಮೂರೂವರೆ ಸಾವಿರ ಟೀಚರ್ಸ್‌ಗಳು ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು. ಉಳಿದವರು ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದರು. ಸುಪ್ರೀಂ

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕೋರ್ಟಿನ ತೀರ್ಮಾನದಡಿಯಲ್ಲಿ ಸುಮಾರು 12 ಸಾವಿರ ನೌಕರರನ್ನು ತಾವು ಮೆರಿಟ್ ಮೇಲೆ ನೇಮಕ ಮಾಡಿಕೊಂಡಿದ್ದೀರಿ, ಅವರಲ್ಲಿ ಸುಮಾರು 4,600 ಅಭ್ಯರ್ಥಿಗಳು ಇವತ್ತು ಉಳಿದುಕೊಂಡಿದ್ದಾರೆ. ಸರ್ಕಾರ ಪದೇ ಪದೇ ಆಶ್ವಾಸನೆ ಕೊಟ್ಟುಕೊಂಡು ಬಂದಿದೆ. ಯಾವುದೇ ಕಾರಣದಿಂದ ಈ ಒಂದು ಗ್ರಾಮೀಣಾ ಕೃಪಾಂಕದಡಿಯಲ್ಲಿ ನೇಮಕ ಮಾಡಿಕೊಂಡಿರತಕ್ಕಂಥವರುಗಳನ್ನು ಬಿಡುಗಡೆ ಮಾಡುವುದಿಲ್ಲ. ಅವರಿಗೆ ವಿಶೇಷವಾದ ನಿಯಮಾವಳಿಗಳನ್ನು ರಚಿಸುತ್ತೇವೆ. ಒಂದು ವೇಳೆ ಅವರಿಗೆ ಬಿಡುಗಡೆ ಮಾಡತಕ್ಕಂಥ ಅನಿವಾರ್ಯತೆ ಬಂದರೆ ಒಂದು ದಿನದ ಮಟ್ಟಿಗೆ ಅವರನ್ನು ರಿಲೀವ್ ಮಾಡಿ ಮರುದಿನವೇ ಅವರನ್ನು ನೇಮಕ ಮಾಡಿ ನಾವು ಮುಂದುವರಿಸುತ್ತೇವೆ ಎನ್ನತಕ್ಕಂಥ ವಿಚಾರವನ್ನು, ಪದೇ ಪದೇ, ಮುಖ್ಯಕಾರ್ಯದರ್ಶಿಗಳು ಹಾಗೂ ಕಾನೂನು ಸಚಿವರು ಕೊಡುತ್ತಿದ್ದರು. ಇವತ್ತು ಏನಾಗಿದೆ ಅವರನ್ನು ಕೆಲಸದಿಂದ ಇಲಾಖಾವಾರು ಹಂತ ಹಂತವಾಗಿ ತೆಗೆಯುತ್ತಾ ಬಂದಿರುವುದು ಸುಮಾರು 15 ದಿವಸಗಳಿಂದ ಇದು ನಡೆಯುತ್ತಿದೆ. ಇವತ್ತು ಎಲ್ಲರೂ ಬೀದಿಪಾಲಾಗಿದ್ದಾರೆ. ಇವತ್ತು ಎಲ್ಲಾ ಅಭ್ಯರ್ಥಿಗಳು ಸರ್ಕಾರದ ಮೇಲಿನ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಸಮಾರು 50 ಜನ ಸಬ್ ಇನ್ಸ್‌ಪೆಕ್ಟರ್ಸ್, ಮೂರೂವರೆ ಸಾವಿರ ಟೀಚರ್ಸ್, ಒಂದು ಕಡೆ ಶಾಲೆಗಳಲ್ಲಿ ಟೀಚರ್ಸ್ ಇಲ್ಲ. 7ನೇ ತರಗತಿಯಿಂದ 8ನೇ ತರಗತಿಯವರೆಗೆ ನೀವು ಅಪ್‌ಗ್ರೇಡ್ ಮಾಡಿದಿರಿ ಅಲ್ಲಿ ಟೀಚರ್ಸ್ ಇಲ್ಲವೆಂದು ನಾವು ಇಲ್ಲಿಯೇ ಗಲಾಟೆ ಮಾಡುತ್ತೇವೆ. ಇನ್ನೊಂದು ಕಡೆ ಗ್ರಾಮೀಣಾ ಕೃಪಾಂಕದಡಿಯಲ್ಲಿ ನೇಮಕ ಮಾಡಿದಂಥ ಮೂರೂವರೆ ಸಾವಿರ ಶಿಕ್ಷಕರನ್ನು ಹೊರಗೆ ಹಾಕುತ್ತಿದ್ದೀರಿ. ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ಆ ಜಾಗವನ್ನು ಖಾಲಿ ಇಡದೇ ಬೇರೆಯವರನ್ನು ಅಂದರೆ ಕೆಳಗಡೆ ಇದ್ದಂಥವರನ್ನು ನೇಮಕ ಮಾಡುತ್ತಿದ್ದೀರಿ, ಹೀಗಾಗಿ ಅವರು ಹತಾಶರಾಗಿ ಇವತ್ತು ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿ ರೈತರು ಪ್ರಾಣ ಕಳೆದುಕೊಂಡರು, ಅವರು ಹತಾಶರಾಗಿ ಅವರೇ ಆತ್ಮಹತ್ಯೆ ಮಾಡಿಕೊಳ್ಳುವಂಥ ಪ್ರಸಂಗ ಬಂತು. ನಂತರ ಆನ್‌ಲೈನ್ ಲಾಟರಿ ತೆಗೆದುಕೊಂಡು ಅದರಲ್ಲಿ ಪ್ರಾಣ ಕಳೆದುಕೊಳ್ಳುವಂಥ ಪ್ರಸಂಗ ಬಂತು. ಇವತ್ತು ಗ್ರಾಮೀಣಾ ಕೃಪಾಂಕದಡಿಯಲ್ಲಿ ಕೆಲಸ ಹೋದಂಥವರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಹೀಗೆ ಸಮಾಜದಲ್ಲಿ ನಾವು ಜನರ ಪ್ರಾಣ ರಕ್ಷಣೆ ಮಾಡದಿದ್ದರೆ ಅವರಿಗೆ ಸ್ಥಿರತೆಯನ್ನು ಕೊಡದೇ ಇದ್ದರೆ ಆ ಸರ್ಕಾರಗಳು ಸರ್ಕಾರವಲ್ಲ. ಆದುದರಿಂದ ನಾನು ಕೇಳುವುದು, ತಾವೇನು ಹೇಳಿಕೆ ಕೊಟ್ಟಿದ್ದೀರಿ, ಸರ್ಕಾರ ಮನಸ್ಸು ಮಾಡಿದರೆ ಏನೇನೂ ತೊಂದರೆಯಿಲ್ಲ. ಏಕೆಂದರೆ, ನಾವು ಸರ್ಕಾರವನ್ನು ನಡೆಸಿದ್ದೇವೆ. ಹೊಸ ನಿಯಮಾವಳಿಗಳನ್ನು, ಸ್ಪೆಷಲ್ ರಿಕ್ರೂಟ್‌ಮೆಂಟ್ ರೂಲ್ಸ್ ಎಂದು ಮಾಡಬಹುದು. ಫಾರ್ ಒನ್ ಟೈಂ ಅಪರೇಷನ್‌ಗೆ ಅವಕಾಶವಿದೆ ಸರ್ಕಾರದಲ್ಲಿ, ಈ ಒಂದು ಸನ್ನಿವೇಶದಲ್ಲಿ ಆ ರೀತಿ ನೇಮಕ ಮಾಡಿ, ಈ ಒಂದು ನಿಯಾಮಾವಳಿ ಮುಂದಕ್ಕೆ ಅನ್ವಯವಾಗುವುದಿಲ್ಲವೆಂದು, ಒನ್ ಟೈಂ ಅಪರೇಷನ್ ಪ್ರಕಾರ ಸ್ಪೆಷಲ್ ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ನೀವು ಮಾಡಿ ಅವರನ್ನು ತೆಗೆಯತಕ್ಕಂಥ ಪ್ರಯತ್ನ ಮಾಡಬಾರದು. ಅದನ್ನು ತಾವು ಮಾಡಿಲ್ಲ. ಇವತ್ತು ಏನು ಹೇಳುತ್ತಿದ್ದಾರೆ. ಕೆಲವು ಅಧಿಕಾರಿಗಳು ಇದ್ದಾರೆ. ಪಟ್ಟಣದಲ್ಲಿ ಸೀಮಿತವಾಗಿರತಕ್ಕಂಥ ಅಧಿಕಾರಿಗಳು, ಡಿಪಿಆರ್‌ನಲ್ಲೂ ಇದ್ದಾರೆ. ಬೇರೆ ಬೇರೆ ಕಡೆಗಳಲ್ಲೂ ಇದ್ದಾರೆ. ಅವರೇನು ನಿಮಗೆ ತಪ್ಪು ಮಾಹಿತಿ ಕೊಡುತ್ತಾರೆ. ಬೇಕಂತಲೇ ಅದಕ್ಕೆ ರಿವಿಜನ್ ಪಿಟಿಷನ್ ಹಾಕಿದ್ದಾರೆ. ಅದಕ್ಕೇನು ಹೇಳುತ್ತಾರೆ. ಸಾರ್ ತಾವು ರಿವಿಜನ್ ಪಿಟಿಷನ್ ಹಾಕಿಸಿದ್ದೇವೆಂದು ಹೇಳಿಬಿಡಿ. ಅಲ್ಲಿ

ತೀರ್ಮಾನ ಆಗುವ ತನಕ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ ಎಂದು ಹೇಳುತ್ತಾರೆ. ಅದು ತಪ್ಪಿಸಿಕೊಳ್ಳತಕ್ಕಂಥ ವಿಧಾನ. ನಾನು ಏನು ಹೇಳುವುದು ಎಂದರೆ, ರಿವಿಜನ್ ಪಿಟಿಷನ್ ಹಾಕಿರುವುದು ಅದು ಪ್ರತ್ಯೇಕವಾಗಿರಲಿ, that doesn't prevent you from evolving a new recruitment policy. ಆದ್ದರಿಂದ, ಕೃಪಾಂಕದಡಿ ನೇಮಕವಾದವರು ಬೀದಿಪಾಲಾಗಿದ್ದು ಇವತ್ತು ವಿಧಾನ ಸೌಧ, ಶಾಸಕರಭವನ ಅಲ್ಲಿ ಇಲ್ಲಿ ಅಲೆಯುತ್ತಿದ್ದಾರೆ. ಬಹಳ ಗಾಬರಿಯಾಗಿ ಜೀವನಕ್ಕೆ ಭವಿಷ್ಯ ಇಲ್ಲದೇ ಅಲೆಯುತ್ತಿದ್ದಾರೆ. ಆದ್ದರಿಂದ ನಾನು ಸರ್ಕಾರವನ್ನು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ತಕ್ಷಣ ಅವರಿಗೆ ಮುಖ್ಯಮಂತ್ರಿಗಳ ಮೂಲಕ ಅವರಿಗೆ ಆಶ್ವಾಸನೆ ಕೊಟ್ಟು, ಇಷ್ಟು ದಿವಸದೊಳಗೆ ವಿಶೇಷ ನಿಯಮಾವಳಿಗಳನ್ನು ರಚಿಸುತ್ತೇವೆ. ಸುಪ್ರೀಂಕೋರ್ಟಿನಲ್ಲಿ ರಿವಿಜನ್ ಪಿಟಿಷನ್ ಇದ್ದರೂ ಅದು ನಮಗೆ ಅಡ್ಡಿ ಬರುವುದಿಲ್ಲ. ಆದುದರಿಂದ ಇವರ್ಯಾರೂ ಪ್ರಾಣ ಹತ್ಯೆ ಮಾಡಿಕೊಳ್ಳಬಾರದು ನಿಮ್ಮ ರಕ್ಷಣೆಯನ್ನು ನಾವು ಮಾಡುತ್ತೇವೆ ಎನ್ನುವ ಸ್ಪಷ್ಟವಾದಂಥ ಒಂದು ಅಭಿಪ್ರಾಯವನ್ನು ಆಶ್ವಾಸನೆಯನ್ನು ಈ ಸದನದಲ್ಲಿ ಕೊಡಬೇಕು. ಆಗ ಮಾತ್ರ ಸ್ವಲ್ಪ ಸಮಾಧಾನವಾಗಬಹುದು ಎಂದು ಒತ್ತಾಯಪೂರ್ವಕವಾಗಿ ಹೇಳುತ್ತಾ, ತಾವು ಸದನದಲ್ಲಿ ಮುಖ್ಯಮಂತ್ರಿಗಳ ಮುಖಾಂತರವೇ ಈ ಒಂದು ಹೇಳಿಕೆಯನ್ನು ಕೊಡಿಸಬೇಕು. ಮತ್ತು ಅದಕ್ಕೆ ಹಿನ್ನೆಲೆಯಾಗಿ ನಿಯಾಮಾಳಿಗಳ ರಚನೆ ಮಾಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಅಧ್ಯಕ್ಷರು : ತಮಗೆ ಅವಕಾಶ ಕೊಡುತ್ತೇನೆ. ಒಂದು ವಿಷಯ ಏನೆಂದರೆ ಅವರಿಬ್ಬರೂ ಏನೂ ಈಗಾಗಲೇ ಹೇಳಿದ್ದಾರೆ ಅದನ್ನು ಬಿಟ್ಟು ಹೊಸ ವಿಷಯ ಇದ್ದರೆ ಹೇಳಿ ಅದೇ ಹೇಳಿರುವುದನ್ನೇ ಹೇಳುವುದು ಬೇಡ.

† **ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ)** : ಮಾನ್ಯ ಅಧ್ಯಕ್ಷರೆ, ನಮ್ಮೆಲ್ಲರಿಗೂ ಅದರಲ್ಲೂ ಇಡೀ ರಾಜ್ಯದ ಜನತೆಗೆ ವಿಶೇಷವಾಗಿ ಯುವಕರಿಗೆ ಈ ಗ್ರಾಮೀಣಾ ಕೃಪಾಂಕದಿಂದ ಬಂದ ನಿರ್ಣಯ ಹಾಗೂ ಸರ್ಕಾರ ಈ ಎಲ್ಲಾ ಸಂದರ್ಭಗಳಲ್ಲಿಯೂ ನಡೆದುಕೊಂಡಿರುವ ರೀತಿಯ ಬಗ್ಗೆ ಜಿಗುಪ್ಸೆ ಬಂದಿದೆ ಆಕ್ರೋಶ ಬಂದಿದೆ. ಸರಕಾರ ಈ ರೀತಿಯಾಗಿ ನಡೆದುಕೊಂಡರೆ, ಕೋರ್ಟಿನ ಎದುರುಗಡೆ ನಡೆದುಕೊಂಡ ರೀತಿ, ಇವತ್ತು ಜನತೆಯ ಎದುರಿನಲ್ಲಿ ನಡೆದುಕೊಳ್ಳುವಂಥ ರೀತಿ, ಇದನ್ನು ನೋಡಿದರೆ ನಮ್ಮೆಲ್ಲರಿಗೂ ಬೇಸರವಾಗುವಂಥದ್ದು ಸಹಜವಾಗಿದೆ. ಸರ್ಕಾರದ ಬಗ್ಗೆ ತಾತ್ಸಾರ ಬರುವಂಥದ್ದು ಸಹಜವಾಗಿದೆ. ನಾನು ಬಹಳ ಹಿಂದಿನಿಂದ ಮಾತನಾಡುವುದಕ್ಕೆ ಬಯಸುವುದಿಲ್ಲ. ಮಾನ್ಯ ಬಂಗಾರಪ್ಪನವರು ಗ್ರಾಮೀಣ ಕೃಪಾಂಕವನ್ನು 5 ಪರ್ಸೆಂಟ್‌ಗೆ ತಂದರು. ನಂತರ ಮಾನ್ಯ ಜೆ.ಹೆಚ್. ಪಟೇಲ್‌ರವರು ಅದನ್ನು 15 ಪರ್ಸೆಂಟ್‌ಗೆ ಏರಿಸಿದರು. ಇದರಿಂದಾಗಿ ಗ್ರಾಮಾಂತರ ಪ್ರದೇಶದಲ್ಲಿರುವ ಪ್ರತಿಭಾವಂತ ಯುವಕರಿಗೆ ಇವತ್ತು ಉದ್ಯೋಗದಲ್ಲಿ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಹೇಗೆ ಅವಕಾಶಗಳು ಸಿಕ್ಕವು ಹೇಗೆ ಅನುಕೂಲವಾಯಿತು ಎಂಬ ಬಗ್ಗೆ ನಾನು ಹಿಂದಿನ ವಿಷಯಗಳಿಗೆ ಹೋಗುವುದಕ್ಕೆ ಬಯಸುವುದಿಲ್ಲ. ಆದರೆ ನಮಗೆ ಗೊತ್ತಿದೆ ನಗರ ಪ್ರದೇಶದಲ್ಲಿ ಸಿಗುವಂಥ ಶಿಕ್ಷಣದ ಸೌಲಭ್ಯಕ್ಕೂ, ಗ್ರಾಮೀಣಾ ಭಾಗದಲ್ಲಿ ಸಿಗುವಂಥ ಶಿಕ್ಷಣದ ಸೌಲಭ್ಯಕ್ಕೂ ಸಾಕಷ್ಟು ವ್ಯತ್ಯಾಸವಿರುವುದನ್ನು ಇವತ್ತು ನಾವು ಕಾಣುತ್ತಿದ್ದೇವೆ. ಇದನ್ನು ಸರಿದೂಗಿಸಲು ಈವೊಂದು 15 ಪರ್ಸೆಂಟ್ ಕೃಪಾಂಕವನ್ನು ಕೊಡತಕ್ಕಂಥ ಒಂದು ಕಾಯಿಗೆ ಬಂದಿದ್ದು ಅದರಂತೆ ಇವರು ನೇಮಕವಾಗಿದ್ದು ಇದೆ. ಈಗ ಸುಮಾರು

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

13 ರಿಂದ 14 ಸಾವಿರ ಜನ ಏನು ನೇಮಕಗೊಂಡು ಸುಪ್ರೀಂ ಕೋರ್ಟಿನ ಆದೇಶದ ಮೇರೆಗೆ ಇವತ್ತು ವಾಪಸ್ ಆಗುವಂತೆ ಆಗಿದೆ. ಇದನ್ನು ವಿವಿಧ ಹಂತದಲ್ಲಿ ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡದೇ ಇರುವುದರಿಂದ ಇವತ್ತು ಈ ಸ್ಥಿತಿ ನಿರ್ಮಾಣವಾಗಿದೆ. ಕೋರ್ಟ್‌ಗಳಲ್ಲಿ ವಾದ ಮಂಡಿಸದಿದ್ದರೂ ನಮಗೆ ನಮ್ಮ ಪರವಾಗಿ ನಾವು ಮಾಡಿಕೊಳ್ಳುವುದಕ್ಕೆ ಸಾಧ್ಯವಿತ್ತು. ಪ್ರತ್ಯೇಕವಾದ ಕಾನೂನು ರಚನೆ ಮಾಡಿದ್ದರೂ ನಮ್ಮ ಪರವಾಗಿ ನಾವು ಮಾಡಿಕೊಳ್ಳುವುದಕ್ಕೆ ಸಾಧ್ಯವಿತ್ತು. ಅದೆಲ್ಲವೂ ಹಂತ ಮೀರಿ ಹೋಗಿದೆ. ಹೀಗಾಗಿ ಆ ಹಂತದ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಬಯಸುವುದಿಲ್ಲ. ಆದರೆ ಈ ತಕ್ಷಣದಲ್ಲಾದರೂ ಸರ್ಕಾರ ಹೇಳಿರುವಂತೆ ಅದಕ್ಕೆ ಅಗತ್ಯವಿರುವಂತೆ ಕಾನೂನನ್ನು ರಚನೆ ಮಾಡಿ ಸುಪ್ರೀಂಕೋರ್ಟಿನಲ್ಲಿ ಅದಕ್ಕೆ ಮೇಲ್ಮನವಿಯನ್ನು ಸಲ್ಲಿಸಿ ನಮ್ಮ ಯುವಕರ ಒಂದು ಭವಿಷ್ಯದ ಬಗ್ಗೆ ವಿಶ್ವಾಸ ಬರುವಮತೆ ನಡೆದುಕೊಳ್ಳಬೇಕಾದ ಅಗತ್ಯತೆ ಇತ್ತು. ಆದರೆ ಕಳೆದ ಒಂದೂವರೆ ತಿಂಗಳಿನಿಂದ ಸಚಿವರ ಹಾಗೂ ಅಧಿಕಾರಿಗಳ ಹೇಳಿಕೆ ನೋಡಿದರೆ ಪರಸ್ಪರ ಗೊಂದಲದಿಂದ ಕೂಡಿವೆ. ದ್ವಂದ್ವದಿಂದ ಕೂಡಿದೆ. ನಾವು ಯಾವ ಹೇಳಿಕೆಯನ್ನು ನಂಬಬೇಕು. ಬಿಡಬೇಕು. ಎಂದು ಆ ನೌಕರರಿಗೆ ಮಾತ್ರವಲ್ಲದೆ ನಮಗೂ ಸಹ ಗೊಂದಲ ನಿರ್ಮಾಣವಾಗುವಂತೆ ಸರ್ಕಾರ ಮಾಡಿದೆ. ಇದೊಂದು ಸರ್ಕಾರದ ತಂತ್ರಗಾರಿಕೆ ಎಂದು ಅನ್ನಿಸುತ್ತದೆ. ಒಬ್ಬರು ಒಂದು ರೀತಿ ಹೇಳಿಕೆ ಕೊಡುವುದು. ಇನ್ನೊಬ್ಬರು ಇನ್ನೊಂದು ರೀತಿ ಹೇಳಿಕೆ ಕೊಡುವುದು, ಈ ರೀತಿಯಾಗಿ ಗೊಂದಲಮಯವಾದ ವಾತಾವರಣವನ್ನು ಸೃಷ್ಟಿಸಿರುವುದರಿಂದ, ಸರ್ಕಾರದ ಬಗ್ಗೆ ಇನ್ನೂ ಜಾಸ್ತಿ ಹೇಳುವುದಿಲ್ಲ.

ಅಧ್ಯಕ್ಷರು : ನಾನು ಅದಕ್ಕೆ ಅಲೌ ಮಾಡಿದ ಮೇಲೆ ನೀವು ಎಷ್ಟಾದರೂ ಮಾತನಾಡಿ. It is only a perliminary submission by the members who have signed, not by others.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅದಕ್ಕೆ ಎರಡು ವಿಷಯಗಳನ್ನು ಮಾತ್ರ ಪ್ರಸ್ತಾಪಿಸುತ್ತಿದ್ದೇನೆ. ಸರ್ಕಾರ ಈ ರೀತಿಯ ಗೊಂದಲಗಳನ್ನು ಉಂಟು ಮಾಡುವ ಹೇಳಿಕೆ ಕೊಡುತ್ತಿರುವುದರಿಂದ ಮತ್ತಷ್ಟು ಭಯಭೀತರಾಗಿದ್ದಾರೆ.

ಅಧ್ಯಕ್ಷರು : ನಿಮ್ಮ ನಾಯಕರು ಹಾಗೂ ಮಾನ್ಯ ಸೋಮಶೇಖರ್‌ರವರು ವಿಷಯವನ್ನು ಗಮನಕ್ಕೆ ತಂದಿದ್ದಾರೆ. ನಾನು ಅಲೌ ಮಾಡಿದ ಮೇಲೆ ನೀವು ಎಷ್ಟು ಹೊತ್ತಾದರೂ ಮಾತನಾಡಿ 2–3 ವಿಷಯಗಳನ್ನು ಈಗಲೇ ಏಕೆ ಪ್ರಸ್ತಾಪಮಾಡುತ್ತೀರಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಆ ವಿಷಯ ಎಷ್ಟು ಗಂಭೀರವಾಗಿದೆ ಎಂದರೆ.

ಅಧ್ಯಕ್ಷರು : ವಿಷಯ ಗಂಭೀರವಾಗಿದೆ ಎಂಬುದು ನನಗೆ ಅರ್ಥವಾಗಿದೆ. ಅದಕ್ಕೋಸ್ಕರವಾಗಿಯೇ ಅವಕಾಶ ಕೊಟ್ಟಿರುವುದು.

ಶ್ರೀ ಆರ್.ವಿ. ದೇಶಪಾಂಡೆ : ಇದು ಗಂಭೀರವಾಧ ವಿಷಯ ನಿಜ. ಸಂಬಂಧಪಟ್ಟ ಮಂತ್ರಿಗಳು ಇಲ್ಲ ಅವರು ಸಬ್‌ಮಿಷನ್ ಮಾಡುವುದಕ್ಕೆ ನಾನು ಬೇಡ ಎನ್ನುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸೋಮಶೇಖರ್‌ರವರು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಮಂತ್ರಿಗಳು ಉತ್ತರಿಸುತ್ತಾರೆ.

ಅಧ್ಯಕ್ಷರು : ಮಂತ್ರಿಗಳು ಉತ್ತರ ಕೊಟ್ಟ ಮೇಲೆ ನೀವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ದೇಶಪಾಂಡೆಯವರು ಬಹಳ ಗಂಭೀರವಾದ ವಿಷಯ ತಾವು ಚರ್ಚೆಗೆ ಸಿದ್ಧರಿದ್ದೇವೆಂದು ಹೇಳಿದರು.

ಶ್ರೀ ಆರ್.ವಿ. ದೇಶಪಾಂಡೆ : ವಿಷಯ ಗಂಭೀರವಾಗಿದೆ. ಅದಕ್ಕೆ ಉತ್ತರ ಕೊಡಲಿಕ್ಕೆ ನಾನು ಹೇಳಿದೆ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸೋಮಶೇಖರ್‌ರವರು ಪ್ರಸ್ತಾಪಿಸಿದ್ದಾರೆ. ಮಂತ್ರಿಗಳನ್ನು ಕರೆಸುತ್ತೇನೆ. ಉತ್ತರ ಕೊಡುತ್ತೇವೆಂದು ಹೇಳಿದೆ ಅಲ್ಲವೆ? ವಿಷಯ ಮಹತ್ವ ಇಲ್ಲವೆಂದು ನಾನು ಹೇಳಿಲ್ಲ. ಯುವಕರ ಭವಿಷ್ಯ ಅದರಲ್ಲಿ ಇದೆ. ಬಹಳ ಮಹತ್ವ ಇದೆ. ನಮಗೂ ಚಿಂತನೆ ಇದೆ. ಸರ್ಕಾರ ಪರಿಶೀಲನೆ ಮಾಡುತ್ತಿದೆ. ಯಾವ ಪ್ರಕಾರ ಮಾಡಬೇಕೆಂದು ಒಂದು ಪರಿಹಾರ ಕಂಡು ಹಿಡಿಯಬೇಕಲ್ಲವೆ? ಇದಕ್ಕೆ ಸರ್ಕಾರ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತಿದೆ.

Mr. Speaker : Now only preliminary submission.. ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ ಆಗ ನೀವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸರ್ಕಾರ ಎಷ್ಟು ಗಂಭೀರ ಇದೆ ಎಂದು ನಿಜವಾಗಿ ನಮಗೆ ಸಮಸ್ಯೆ ಉಂಟಾಗಿದೆ. ಈ ಸದನದಲ್ಲಿ ಈ ರೀತಿಯಾದರೆ ಹೇಗೆ?

ಅಧ್ಯಕ್ಷರು : ಗಂಭೀರದ ಪ್ರಶ್ನೆಯಲ್ಲ. ಅವರೂ ಕೂಡ ಅದಕ್ಕೋಸ್ಕರ ಅಲೌ ಮಾಡಿ ಎಂದು ಹೇಳಿದರಲ್ಲವೆ?

ಶ್ರೀ ಆರ್.ವಿ. ದೇಶಪಾಂಡೆ : ಇವರು ಸರ್ಕಾರದ ಗಾಂಭೀರತೆ ಬಗ್ಗೆ ಮಾತನಾಡುತ್ತಾರೆ. ಈಗ ಅವರು ನೋಟೀಸ್ ಕೊಟ್ಟಿದ್ದಾರೆ. ಅದು ಮಂತ್ರಿಗಳಿಗೆ ಮುಟ್ಟಿತೋ ಇಲ್ಲವೋ ಗೊತ್ತಿಲ್ಲ. ನಾವು ಉತ್ತರ ಕೊಡುತ್ತೇವೆಂದು ಹೇಳಿದ್ದೇವೆ. ಉತ್ತರ ಕೊಡುವುದಿಲ್ಲ. ಎಂದು ಹೇಳಿಲ್ಲ. ವಿಷಯದ ಗಂಭೀರತೆ ಕಡಿಮೆ ಇದೆ ಎಂದು ಹೇಳಿಲ್ಲ ಸರ್ಕಾರ ಬೇಜವಾಬ್ದಾರಿಯಿಂದ ವರ್ತನೆ ಮಾಡುತ್ತಿಲ್ಲ. ಉತ್ತರ ಕೊಡುತ್ತೇವೆಂದು ಹೇಳುತ್ತಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಆ ಎಲ್ಲಾ ಕಾರಣದಿಂದ ಈ ಸಮಸ್ಯೆ ಉಂಟಾಗಿರುವುದು.

ಅಧ್ಯಕ್ಷರು : ಆಯಿತು, ಅದಕ್ಕಾಗಿ ನೀವು ದೀರ್ಘವಾಗಿ ಹೋಗಬೇಡಿ. ಇದು ಪ್ರಿಲಿಮಿನರಿ ಸಬ್‌ಮಿಷನ್ ಎಂದು ನಾನು ಹೇಳಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಾನು ಒಂದೇ ಒಂದು ವಿಷಯವನ್ನು ಹೇಳುತ್ತಿದ್ದೇನೆ. ಯಾರನ್ನು ನೌಕರಿಯಿಂದ ವಜಾ ಮಾಡಬೇಕೆಂಬ ಆದೇಶವನ್ನು ಹೊರಡಿಸಲಾಗಿದೆ ಅವರು ವಜಾಗೊಳ್ಳುತ್ತಿದ್ದಾರೆ. ಮರು ನೇಮಕಗೊಳ್ಳುವುದಕ್ಕೆ ಪ್ರಕ್ರಿಯೆಗಳು ಪ್ರಾರಂಭವಾಗಿವೆ. ಇದರಿಂದ ಮುಂದೆ ಸಮಸ್ಯೆ ಇನ್ನಷ್ಟು ಕಗ್ಗಂಟಾಗುವುದು ಇದೆ. ಹಾಗಾಗಿ ತಕ್ಷಣದಲ್ಲಿ ಇವತ್ತು ನಾಳೆಯೊಳಗಾಗಿ ತುರ್ತಾಗಿ ಸರ್ಕಾರ ಹೊಸ ಕಾನೂನನ್ನು ತಂದು ಅಥವಾ ಸುಪ್ರೀಂಕೋರ್ಟಿಗೆ ಮೇಲ್ಮನವಿಯನ್ನು ಸಲ್ಲಿಸುವುದರ ಮೂಲಕ ಈಗ ಹೊಸ ನೇಮಕಾತಿಯನ್ನು ಮಾಡಿಕೊಂಡು ನಂತರ ಅವರನ್ನು ಮತ್ತೆ ಮನೆಗೆ ಕಳುಹಿಸುವಂಥದ್ದು ಅಥವಾ ಅವರನ್ನು ರೆಗ್ಯುಲರೈಸ್ ಮಾಡುವುದಕ್ಕೆ ಇರುವ ತೊಂದರೆಗಳು, ಬೇರೆ ಬೇರೆ ಸಮಸ್ಯೆಗಳಿಗೆ ಇದೊಂದು ಕಾರಣವಾಗುತ್ತದೆ. ಹಾಗಾಗಿ ಈ ರೀತಿ ಗೊಂದಲಗಳನ್ನು ಇನ್ನಷ್ಟು ಹೆಚ್ಚು ಕಗ್ಗಂಟಾಗಿ ಮಾಡದಿರುವಂತೆ ಸರ್ಕಾರ ತಕ್ಷಣದಲ್ಲಿ ಸ್ಪಂದಿಸಬೇಕೆಂದು ನಾನು ಆಗ್ರಹಿಸುತ್ತೇನೆ.

† **ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ)** : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಾದ ದೇಶಪಾಂಡೆಯವರು ಹೇಳಿದ ಹಾಗೆ ಇದರ ಬಗ್ಗೆ ನೋಟೀಸ್ ಕೊಡಲಿಲ್ಲ. ತಾಂತ್ರಿಕತೆಯ ಬಗ್ಗೆ ಹೇಳುವುದಾದರೆ ನೋಟೀಸ್‌ನ್ನು ಕೊಟ್ಟಿದ್ದೇವೆ. ಮಾನ್ಯ ಮಂತ್ರಿಗಳಿಗೆ ಅದು ಮುಟ್ಟಿಲ್ಲ.

ಅಧ್ಯಕ್ಷರು : ನೋಟೀಸ್‌ನ್ನು ಕೊಟ್ಟಿದ್ದೀರಿ, ಆ ತಾಂತ್ರಿಕತೆಯ ಬಗ್ಗೆ ಅವರು ಇಲ್ಲಿ ಹೇಳಲಿಲ್ಲ. ಮಾನ್ಯ ಮಂತ್ರಿಗಳು ಬರಲಿ ಎಂದು ಹೇಳಿದ್ದಾರಷ್ಟೆ.

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ನಿಮಗೆ ಎಷ್ಟು ಆಸಕ್ತಿ ಇದೆ. ಅದಕ್ಕಿಂತ ಹೆಚ್ಚು ಆಸಕ್ತಿ ನಮಗಿದೆ. ನಿಮಗಿಂತ ಜವಾಬ್ದಾರಿ ಹೆಚ್ಚಿನ ನಮ್ಮ ಸರ್ಕಾರದ ಮೇಲಿದೆ.

Sri B. Somashekhar : You are a party to the decision of the previous Government.

Sri R.V. Deshapande : We are more responsible.

ಇದರಲ್ಲಿ ಇಂಡಿವಿಜಿಯಲ್ ಪ್ರಾಬ್ಲಮ್ ಏನಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ಏನು ಹೇಳುತ್ತೇನೆಂದರೆ, ಇಲ್ಲಿ ಏನು ಚರ್ಚೆ ಮಾಡುವುದು ಏನೂ ಇಲ್ಲ. ಎಲ್ಲಾ ಚರ್ಚೆಯಾಗಿದೆ. ಇದರ ಬಗ್ಗೆ ಹೇಳಿದ್ದಾಗಿದೆ ಎಲ್ಲಾ ಗೊತ್ತಾಗಿದೆ. ನನಗೆ ಒಂದು ನೋವು ಏನೆಂದರೆ, ಮೇಲ್ಮನೆಯಲ್ಲಿ ಎಲ್ಲಾ ಚರ್ಚೆಯಾಗಿ ಮುಗಿದು ಬಿಡುತ್ತವೆ. ಇಲ್ಲಿ ಚರ್ಚೆಗೆ ಬರುವುದಿಲ್ಲ. ಇದು ನಮಗೆ ಇಲ್ಲಿ ಇರುವ ಸಮಸ್ಯೆಯಾಗಿದೆ. ಹಾಗಾದರೆ ನಾವು ಏನು ಮಾಡುವುದು? ಇಲ್ಲಿ ಯಾವ ವಿಷಯವು ಚರ್ಚೆಯಾಗಿಲ್ಲ. ಈಗಾಗಲೇ ಬಿಸಿಯೂಟದ ಬಗ್ಗೆ ಚರ್ಚೆ ಅರ್ಧ ಆಗಿ ನಿಂತಿದೆ. ಆಮೇಲೆ ಸಿಇಟಿ ಬಗ್ಗೆ ಚರ್ಚೆ ಆಗಲಿಲ್ಲ. ಆಮೇಲೆ ಈ ಕೃಪಾಂಕದ ಬಗ್ಗೆ ಚರ್ಚೆ ಇಲ್ಲ. ಹೀಗೆ ಚರ್ಚೆಯಾಗದೆ ನಾಳೆ ನೀವು ಸದನವನ್ನು ಮುಗಿಸಿ ಬಿಡುತ್ತೀರಿ, ಏನೋ ಹೇಳಿ ಹೋಗಿ ಬಿಡುವುದಾಗುತ್ತದೆ. ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಸಿಗುತ್ತಿಲ್ಲ. ಇದು ಕೂಡ ನಮಗೆ ನೋವಿದೆ. ಬಹುಶಃ ಇದರ ಬಗ್ಗೆ ಮೇಲ್ಮನೆಯಲ್ಲಿ ನೀವು ಉತ್ತರವನ್ನು ಕೊಟ್ಟಾಗಿದೆ.

ಅಧ್ಯಕ್ಷರು : ಮಾನ್ಯ ಪಾಟೀಲರೆ, ಇದಕ್ಕೆ ಕಾರಣವೇನು ಗೊತ್ತೇ?

ಶ್ರಿ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಕಾರಣರು ಯಾರು? ನಾವು ಕಾರಣರು ಏನು?

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಹೌದು, ಇದಕ್ಕೆ ನೀವೇ ಕಾರಣರು.

ಶ್ರೀ ಆರ್.ವಿ. ದೇಶಪಾಂಡೆ : ನಾವು ಏಕೆ ಕಾರಣರಾಗುತ್ತೇವೆ? ನಾವು ಮಾನ್ಯ ಸಭಾಧ್ಯಕ್ಷರು ಆದೇಶ ಮಾಡಿದ ಪ್ರಕಾರವಾಗಿ ನಡೆದುಕೊಂಡು ಹೋಗಿರುತ್ತೇವೆ. ಇದರ ಬಗ್ಗೆ ನೀವು ತಿಳಿದುಕೊಳ್ಳಬೇಕು. ಹೆಜ್ಜೆಹೆಜ್ಜೆಗೂ ನೀವು ವಾಕ್‌ಔಟ್ ಮಾಡಿ ಹೊರಗಡೆ ಹೋಗಿ, ಗೊಂದಲ ಮಾಡಿದರೆ....

(ಗೊಂದಲ)

ಅಧ್ಯಕ್ಷರು : ಮಾನ್ಯ ದೇಶಪಾಂಡೆಯವರೆ, ನಾನು ಮಾನ್ಯ ಪಾಟೀಲರಿಗೆ ಉತ್ತರವನ್ನು ಹೇಳುತ್ತೇನೆ. ತಾವು ಸ್ವಲ್ಪ ದಯವಿಟ್ಟು ಕೇಳಿ, ಅದಕ್ಕೆ ಕಾರಣ ಇದೆ, ತಾವುಗಳು ನೋಟೀಸ್

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕೊಡುವುದರಲ್ಲಿ ಸ್ವಲ್ಪ ನಿಧಾನವಾಗಿದೆ. ಇನ್ನು ಎರಡನೆಯದಾಗಿ ಇಲ್ಲಿ ಮಾತನಾಡುವವರು ಜಾಸ್ತಿ ಇದ್ದಾರೆ. ಮೇಲ್ಮನೆಯಲ್ಲಿ ಕಡಿಮೆ ಜನರು ಇದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಹಾಗಾದರೆ ನೀವು ಇಲ್ಲಿ ಹೆಚ್ಚು ಅವಕಾಶವನ್ನು ಮಾಡಿ ಕೊಡಬೇಕು.

ಅಧ್ಯಕ್ಷರು : ಅಲ್ಲಿ ಇಬ್ಬರು ಮಾತನಾಡಿದರೆ, ಇಲ್ಲಿ 10 ಜನರು ಮಾತನಾಡುತ್ತಾರೆ. See, that is the difficulty here. ಇಲ್ಲಿ ಮಾನ್ಯ ಸದಸ್ಯರುಗಳು ಜಾಸ್ತಿ ಇದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇಲ್ಲಿ 224 ಜನ ಸದಸ್ಯರಿದ್ದೇವೆ.

ಅಧ್ಯಕ್ಷರು : ಒಪ್ಪಿಕೊಂಡೆ ಸ್ವಾಮಿ, 224 ಜನ ಸದಸ್ಯರಿದ್ದಾರೆ. 50 ಜನ ಏನು ಮಾತನಾಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಕುಮಾರ್‌ವರು ಎದ್ದು ಮಾತನಾಡುತ್ತಿದ್ದಾರೆ ನೋಡಿ. ಮತ್ತೆ ಏನೋ ಅಂದುಬಿಟ್ಟು ಗಲಾಟೆ ಹಚ್ಚಿ ಬಿಡುತ್ತಾರೆ.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಇಲ್ಲಿ ಹಚ್ಚುವುದು ಏನೂ ಇಲ್ಲ. ಮೊನ್ನೆ ನಾನು ಮಾಡಿದ್ದು ಕರೆಕ್ಟಾಗಿ ಇದೆ ಬಿಡಿ ಅದರ ನ್ಯಾಯ ಬೇರೆ ಇರಲಿ. ನಿನ್ನೆ ಒಂದು ಪ್ರಸ್ತಕವನ್ನು ಬಿಡುಗಡೆ ಮಾಡಿದರಲ್ಲಾ ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ, ಮಾನ್ಯ ಬೈರೇಗೌಡರು ಇಲ್ಲಿ 8 ಗಂಟೆಗಳ ಕಾಲ ಸದನದಲ್ಲಿ ಆಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಬಗ್ಗೆ ಮಂತ್ರಿಯಾಗಿದ್ದಾಗ ಉತ್ತರವನ್ನು ಹೇಳಿದರು ಎನ್ನುವ ಬಗ್ಗೆ ಒಂದು ಪ್ರಸ್ತಾವನೆ ಇಲ್ಲಿ ಬಂತು. ಇಲ್ಲಿ ನಮ್ಮ ಸರ್ಕಾರ ಬಂದ ಮೇಲೆ ಮೂರು ಬಜೆಟ್‌ನ್ನು ನಾವು ಮಂಡನೆ ಮಾಡಿರುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಮಾಡಿರುವ ಉತ್ತರವನ್ನು ಬಿಟ್ಟರೆ ನಮ್ಮ ಆರ್‌ಡಿಪಿಆರ್ ಮಂತ್ರಿಗಳನ್ನು ಬಿಟ್ಟರೆ, ಯಾವ ಮಂತ್ರಿಗಳು ಆ ಡಿಪಾರ್ಟ್‌ಮೆಂಟ್‌ನಲ್ಲಿ ಏನು ಮಾಡಿದ್ದೇವೆ ಎನ್ನುವುದರ ಬಗ್ಗೆ ಹೇಳುವುದಕ್ಕೆ ನೀವು ನಮಗೆ ಅವಕಾಶವನ್ನು ಕೊಟ್ಟಿರುವುದಿಲ್ಲ. ಏನಾದರೂ ಒಂದು ವಿಷಯ ಬಂದಂಥ ಸಂದರ್ಭದಲ್ಲಿ ಯಾವುದಾದರೊಂದು ನ್ಯಾಯವನ್ನು ತೆಗೆದುಬಿಟ್ಟು ಹೊರಗೆ ಹೋಗುವುದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳಿಗೆ ಜವಾಬ್ದಾರಿ ಇದ್ದಿದ್ದರೆ ಅವರವರ ಇಲಾಖೆಯ ಉತ್ತರವನ್ನು ಅವರೇ ಕೊಡುತ್ತಿದ್ದರು.

(ಗೊಂದಲ)

ಅಧ್ಯಕ್ಷರು : ಮಾನ್ಯ ಪಾಟೀಲರೆ, ನೀವು ಸಂಬಂಧಪಟ್ಟ ಸಬ್ಜೆಕ್ಟ್ ಬಿಟ್ಟು, ಪಕ್ಕಕ್ಕೆ ಹೋದ ವಿಚಾರದಿಂದ ಇದು ಆಯಿತು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಸಬ್ಜೆಕ್ಟ್ ಬಿಟ್ಟು ಹೋಗಿರುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಯಾವುದೋ ಇಷೂಸ್ ತೆಗೆದುಕೊಂಡು ಯಾವ್ಯಾವುದಕ್ಕೋ ಹೋಗುತ್ತಾರೆ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ದೇಶಪಾಂಡೆಯವರು ಇದಕ್ಕೆಲ್ಲಾ ವಿರೋಧ ಪಕ್ಷದವರು ಕಾರಣರೆಂದು ಹೇಳಿದರು.

ಅಧ್ಯಕ್ಷರು : ಇಲ್ಲಿ ಕೆಲವೊಂದು ವಿಷಯಗಳು ಚರ್ಚೆಯಾಗುತ್ತಿಲ್ಲ. ಇದಕ್ಕೆ ನಾನಾ ಕಾರಣಗಳು ಇವೆ. ಇದಕ್ಕೆ ಹೆಚ್ಚಿಗೆ ಸದಸ್ಯರುಗಳು ಇರಬಹುದು.

(ಗೊಂದಲ)

ಅಧ್ಯಕ್ಷರು : ಮಾನ್ಯ ಶಿವಕುಮಾರ್‌ರವರೇ ಮಾನ್ಯ ಹೆಗಡೆಯವರೇ ಒಂದು ನಿಮಿಷ. ಪಾಟೀಲರು ಒಂದು ನಿಮಿಷದಲ್ಲಿ ಬೇಗ ಮುಗಿಸುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಆ ಕಾರಣದಿಂದ ನಾನು ಹೇಳುತ್ತಿರುವುದು ಏನೆಂದರೆ, ಇದು ಬಹಳ ಮಹತ್ವವಾದ ವಿಚಾರ ಇದೆ. ನಾಳೆ ಅಧಿವೇಶನ ಮುಗಿದು ಹೋಗಿಬಿಡುತ್ತದೆ. ಬಹುಶಃ ಮಾನ್ಯ ಅಧ್ಯಕ್ಷರೇ ತಾವೂ ಕೂಡ ಹಳ್ಳಿಯಿಂದ ಬಂದವರು, ಇದರ ಬಗ್ಗೆ ಬಹಳ ಬಡಿದಾಟ ಮಾಡಿ ವೈಯಕ್ತಿಕವಾಗಿ ನಾನು ಕೂಡ ಕ್ಯಾಬಿನೆಟ್‌ನಲ್ಲಿ ಬಡಿದಾಟ ಮಾಡಿ ಹಳ್ಳಿಯ ಜನರಿಗೆ ಏನೂ ಸಿಗುವುದಿಲ್ಲವೆಂದು 10 ಪರ್ಸೆಂಟ್ ಕೊಟ್ಟು ಹಳ್ಳಿಯವರನ್ನು ನೌಕರಿಗೆ ತೆಗೆದುಕೊಂಡಿದ್ದರಿಂದ ಸುಮಾರು 13500 ಜನರು ನೌಕರಿಗೆ ಬಂದರು. ಇಷ್ಟು ಜನರು ವಂಚಿತರಾಗುವುದರ ಜೊತೆಗೆ ಇನ್ನು ಮುಂದೆ ಯಾವ ಹಳ್ಳಿಯವರಿಗೂ ನೌಕರಿ ಸಿಗುವುದಿಲ್ಲ. ಇದು ಇಲ್ಲಿ ಇರುವ ಪ್ರಶ್ನೆ. ಆ ಕಾರಣದಿಂದ ಈ 13500 ಜನರನ್ನು ಉಳಿಸಿಕೊಳ್ಳಬೇಕು. ಬೇರೆ ಪ್ರಶ್ನೆಯೇ ಇಲ್ಲ. ಇವರು ನಿಖರವಾದ ಒಂದು ಉತ್ತರವನ್ನು ಹೇಳುವುದಿಲ್ಲ. ಸರ್ಕಾರ ಒಂದು ಉತ್ತರವನ್ನು ಇಲ್ಲಿಯವರೆಗೆ ನಿಖರವಾಗಿ ಹೇಳಿರುವುದಿಲ್ಲ. ರೈತರು ಸಾಯುತ್ತಿದ್ದಾರೆ. ರೈತರ ಇನ್ಸೂರೆನ್ಸ್ ತುಂಬಿ ಅವರ ಬಡ್ಡಿ ಮನ್ನಾ ಮಾಡಿ ಎಂದರೆ ಅದಕ್ಕೂ ನಿಖರವಾದ ಯಾವ ಉತ್ತರವಿಲ್ಲ. ಇವರದ್ದು ಯಾವ ವಿಷಯದ ಮೇಲೆಯೂ ನಿಖರವಾದ ಉತ್ತರವಿಲ್ಲ ಇದಕ್ಕೂ ಕೂಡ ಅಷ್ಟೆ. ಎರಡು ತಿಂಗಳಲ್ಲಿ ಕೃಪಾಂಕದವರ ಬಗ್ಗೆ ಮಾಡುತ್ತೇವೆಂದರು ಅವರನ್ನೂ ತೆಗೆದು ಅವರ ಜಾಗದಲ್ಲಿ ಸಿಟಿ ಯವರನ್ನು ತುಂಬುತ್ತಾರೆ. ಅದರ ಪ್ರಕ್ರಿಯೆ ನಡೆದಿದೆ.

ಅಧ್ಯಕ್ಷರು : ತಾವು ನೇರವಾಗಿ ವಿಷಯಕ್ಕೆ ಬನ್ನಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಆ ಕಾರಣದಿಂದ ನಾನು ಹೇಳುವುದೇನೆಂದರೆ, ಬಹುಶಃ ಧಾರವಾಡ ಮತ್ತು ಗದಗದಲ್ಲಿ ಸತ್ಯಾಗ್ರಹವನ್ನು ಕುಳಿತಿದ್ದಾರೆ. ಅವರು ಸಾಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳವರ ಕ್ಷೇತ್ರದ ಒಬ್ಬ ಹೆಣ್ಣುಮಗಳು ಟ್ರೈನ್‌ನಿಂದ ಹಾರಿ ನದಿಗೆ ಬಿದ್ದು ಸಾಯಬೇಕಾದರೆ ಆಕೆಗೆ ಎಷ್ಟು ನೋವು ಇರಬೇಕು. ಇದನ್ನು ಕೇಳಿದರೆ ಕಣ್ಣಿನಲ್ಲಿ ನೀರು ಬರುತ್ತದೆ. ಆ ಕಾರಣದಿಂದ ನಾನು ಹೇಳುತ್ತಿರುವುದು, ಅವರೆಲ್ಲರ ರಕ್ಷಣೆಯನ್ನು ಇವರು ಖಂಡಿತವಾಗಿ ಏನು ಮಾಡುತ್ತೀರಿ ಎನ್ನುವ ಬಗ್ಗೆ ನಿಖರವಾದ ಉತ್ತರವನ್ನು ಹೇಳಬೇಕು. ನೀವು ಹಾರ್ಯೆಕೆ ಉತ್ತರವನ್ನು ಹೇಳುವುದು, ನಾವು ವಾಕ್‌ಔಟ್ ಮಾಡುವುದು, ನಾವು ಸತ್ಯಾಗ್ರಹವನ್ನು ಕೂಡುವುದು ಇದರಲ್ಲಿ ಯಾವ ಅರ್ಥವೂ ಇಲ್ಲ. ಆ ಕಾರಣದಿಂದ ನಾನು ಹೇಳುತ್ತಿರುವುದು ಖಂಡಿತವಾಗಿ ಆ ಎಲ್ಲಾ ಜನರನ್ನು ರಕ್ಷಣೆ ಮಾಡಬೇಕು. ನಮಗೆ ಈಗಾಗಲೇ ಬಹಳ ಕಷ್ಟವಾಗಿದೆ. ಆ ಹುಡುಗರನ್ನು ಹೇಗೆ ಸಾಂತ್ವನ ಮಾಡಬೇಕು ಎನ್ನುವುದರ ಬಗ್ಗೆ ನಮಗೆ ತಿಳಿಯದಾಗಿದೆ. ಇನ್ನು ಸಾವಿರಾರು ಜನರು ಸಾಯುತ್ತಾರೆ. ರೈತರು ಹೇಗೆ ಸಾಯುತ್ತಿದ್ದಾರೆ. ಅದೇರೀತಿ ಇವರು ಸಾಯುವಂಥ ಪರಿಸ್ಥಿತಿ ಬರುತ್ತದೆ. ಆ ಕಾರಣದಿಂದ ಸರ್ಕಾರವನ್ನು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಹಿರಿಯ ಸಚಿವರಾಗಿ ದೇಶಪಾಂಡೆಯವರೆ ತಾವು ಇದ್ದೀರಿ. ಇದನ್ನು ಮಾಡುವ ಮುಂದೆ ಹಿಂದಿನ ಕ್ಯಾಬಿನೆಟ್‌ನಲ್ಲಿ ತಾವೂ ಕೂಡ ಇದ್ದವರು, ತಾವು ಕೂಡ ಇದಕ್ಕೆ ಭಾದ್ಯಸ್ಥರು. 10 ಪರ್ಸೆಂಟ್ ಮಾಡುವಾಗ ನಾವೆಲ್ಲಾ ಹಳ್ಳಿಯವರು ಒಂದು ಕಡೆ, ಇದರ ಬಗ್ಗೆ ನಮ್ಮ

ಮಾನ್ಯ ಸೋಮಶೇಖರವರು ಹೇಳಿದ ಹಾಗೆ, ಇದು ಅಧಿಕಾರಿ ಮಟ್ಟದಲ್ಲಿ ಅಷ್ಟೇ ಇಲ್ಲ. ಕ್ಯಾಬಿನೆಟ್‌ನಲ್ಲಿ ಕೂಡ ಸಿಟಿ ಮತ್ತು ಹಳ್ಳಿಯ ಮಂತ್ರಿಗಳೆಂದು ಆಗುತ್ತೇವೆ. ಇದು ಹಿಂದೆ ಮತ್ತು ಇವತ್ತು ಇದ್ದದ್ದು ಅಲ್ಲ. ಈ ಕಾರಣದಿಂದ ನಾನು ಹೇಳುವುದು ದಯವಿಟ್ಟು ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ತಾವೇ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ, ಆ ಹುಡುಗರನ್ನು ಮರು ನೇಮಕ ಯಾವಾಗ ಮಾಡುತ್ತಾರೆ ಏನು ಮಾಡುತ್ತಾರೆ ಎನ್ನುವ ಬಗ್ಗೆ ನಿಖರವಾಗಿ ಹೇಳಿ ಅವರ ಪ್ರಾಣವನ್ನು ಉಳಿಸಿ ಅವರಿಗೆ ನೌಕರಿ ಕೊಡಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

† **ಶ್ರೀ ಆರ್.ವಿ. ದೇಶಪಾಂಡೆ** : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಬಿ. ಸೋಮಶೇಖರವರು, ಎಸ್.ಎಸ್. ಪಾಟೀಲರು ಹಾಗೂ ಶ್ರೀ ವಿಶ್ವೇಶ್ವರ ಹೆಗಡೆಯವರು ಬಹಳ ಮಹತ್ವವಾದ ವಿಷಯವನ್ನು ಪ್ರಸ್ತಾಪ ಮಾಡಿರುತ್ತಾರೆ. ಅವರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಸರ್ಕಾರಕ್ಕೂ ಚಿಂತನೆ ಇದೆ. ಅದಕ್ಕೆ ಸರ್ಕಾರವೂ ಕೂಡ ಪರಿಶೀಲನೆ ಮಾಡುತ್ತಿದೆ. ಇದಕ್ಕೊಂದು ಪರಿಹಾರವನ್ನು ಮಾಡುವುದರಲ್ಲಿ ಕಾನೂನಿನಲ್ಲಿ ಕೆಲವು ತೊಡಕುಗಳಿವೆ ಉದಾಹರಣೆಗೆ ಸುಪ್ರೀಂಕೋರ್ಟಿನಲ್ಲಿ ಒಂದು ಕಂಟೆಂಪ್ಟ್ ಪಿಟಿಷನ್ ಫೈಲ್ ಆಗಿದೆ ಹಾಗಾಗಿ ನಾವು ಇವತ್ತು ಯಾರ ಸಲುವಾಗಿ ಆರ್ಡರ್‌ನ್ನು ಮಾಡುವುದಕ್ಕೆ ಹೊರಡುತ್ತೇವೆ. ಅದನ್ನು ಬಹಳ ಜವಾಬ್ದಾರಿಯಿಂದ ಮಾಡಬೇಕಾಗುತ್ತದೆ. ನಮ್ಮೆಲ್ಲರ ಇಚ್ಛೆ ಏನು ಅವರಿಗೆ ಪುನಃ ಉದ್ಯೋಗಾವಕಾಶ ಸಿಗಬೇಕು. ಹಾಗಾಗಿ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಸಂಬಂಧಪಟ್ಟ ಮಾನ್ಯ ಸಚಿವರ ಜೊತೆಯಲ್ಲಿ ಮಾತನಾಡಿ ಇದರ ಬಗ್ಗೆ ಸೂಕ್ತವಾದ ಉತ್ತರವನ್ನು ಇವತ್ತೆ ಕೊಡಲಿಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ. ಏಕೆಂದರೆ ಇದು ಅಡ್ಜರ್ನ್‌ಮೆಂಟ್ ಮೋಷನ್ ರೂಪದಲ್ಲಿ ಬರುವುದಕ್ಕಾಗುವುದಿಲ್ಲ. ಏಕೆಂದರೆ ಇದು ಇವತ್ತು ಆಗಿರುವ ವಿಷಯವಲ್ಲ. ಇದಕ್ಕೆ ಬೇರೆ ರೂಪದಿಂದ ಉತ್ತರ ಕೊಡುವ ವ್ಯವಸ್ಥೆಯಾಗುತ್ತದೆ. ಅವರು ಮದ್ದೂರಿನಲ್ಲಿ ಆತ್ಮಹತ್ಯೆ ಆಗಿರುವಂಥದ್ದರ ಬಗ್ಗೆ ಹೇಳಿದ್ದಾರೆ. ಆತ್ಮಹತ್ಯೆ ಎಲ್ಲಿಯಾದರೂ ನಮಗೆ ನೋವು ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರವೆಂದರೆ ಅಲ್ಲಿ ಸ್ಟೇಷಲ್ ಆತ್ಮಹತ್ಯೆ ಎನ್ನುವ ಮಾತೇ ಇಲ್ಲ. ಹಳಿಯಾಳ ಅಥವಾ ಹುಬ್ಬಳ್ಳಿ ಆಗಬಹುದು. ಎಲ್ಲೆ ಆದರೂ ಎಲ್ಲರಿಗೂ ಬೇಜಾರು ಹಾಗಾಗಿ ಈ ಸಮಸ್ಯೆಗೆ ಒಂದು ಪರಿಹಾರ ಕಂಡುಹಿಡಿಯುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ. ಅದಕ್ಕೊಂದು ಸೂಕ್ತವಾದ ಉತ್ತರವನ್ನು ಇವತ್ತು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಾಯಂಕಾಲದೊಳಗಾಗಿ ತಾವು ಉತ್ತರವನ್ನು ಕೊಡಿಸಿ, ನಾನು ಇಲ್ಲಿ ಇನ್ನೊಂದು ವಿಷಯವನ್ನು ಹೇಳುತ್ತೇನೆ. ಪತ್ರಿಕೆಯಲ್ಲಿ ಬಂದಿರುವ ಪ್ರಕಾರ ನಿಮ್ಮ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಬಿ.ಎಸ್. ಪಾಟೀಲರು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. 4500 ಜನರ ಕೃಪಾಂಕ ನೌಕರರನ್ನು ಸೇವೆಯಿಂದ ಬಿಡುಗಡೆ ಮಾಡುವ ಸುತ್ತೋಲೆ ಹೊರಡಿಸಲಾಗಿದ್ದು ತೆರವಾಗಲಿರುವ ಈ 4500 ಸಿಬ್ಬಂದಿಗಳ ಸ್ಥಾನದಲ್ಲಿ ಹಿಂದಿನ ಸಾರಿ ಅರ್ಹತೆ ಇದ್ದು ಅವಕಾಶದಿಂದ ವಂಚಿತರಾಗಿರುವ ಅಭ್ಯರ್ಥಿಗಳನ್ನು ನೇಮಕ ಮಾಡಲಾಗುವುದೆಂದು ಕರ್ನಾಟಕ ಸರಕಾರದ ಮುಖ್ಯ ಕಾರ್ಯದರ್ಶಿಗಳು ತಿಳಿಸಿದ್ದಾರೆ. ಇದರ ಬಗ್ಗೆ ಸ್ಪಷ್ಟನೆಯನ್ನು ಮಾಡಬೇಕಾಗುತ್ತದೆ. ನೀವು 4500 ಜನರನ್ನು ತುಂಬಿಬಿಟ್ಟರೆ ಹಾಗಾದರೆ ಇವರು ಎಲ್ಲಿ ಹೋಗಬೇಕು? ಒಂದು ಕಡೆ ನೀವು ಮತ್ತೆ ಅವರಿಗೆ ಸೇವಾ ಭದ್ರತೆ ಕೊಡುತ್ತೇವೆ. ಮತ್ತೆ

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಅವರನ್ನು ಮರು ನೇಮಕ ಮಾಡುತ್ತೇವೆಂದು ಹೇಳುತ್ತೀರಿ, ಮತ್ತೆ ಮುಖ್ಯ ಕಾರ್ಯದರ್ಶಿಗಳು ಹೇಳುತ್ತಾರೆ ಅಂದರೆ ಸರ್ಕಾರ ಹೇಳಿದಂತೆ, ಅವರ ಬದಲಾಗಿ ಬೇರೆಯವರನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಇದಕ್ಕೆ ಸ್ಪಷ್ಟವಾದ ಉತ್ತರ ಇವತ್ತು ಸಾಯಂಕಾಲದೊಳಗಾಗಿ ಬೇಕು.

ಅಧ್ಯಕ್ಷರು : ಆಯಿತು, ಉತ್ತರವನ್ನು ಕೊಡಿಸೋಣ. ಇದನ್ನು ಅಡ್ವರ್ನ್‌ಮೆಂಟ್ ಮೋಷನ್‌ನಲ್ಲಿ ಬೇಡ, ನಿಯಮ 69ಕ್ಕೆ ಚೇಂಜ್ ಮಾಡಿ. ಮಂತ್ರಿಗಳು ಬಂದ ತಕ್ಷಣ ಉತ್ತರ ಕೊಡಿಸುತ್ತೇನೆ.

Sri B. Somashekhar : We are not particular about the Rules under which should discuss. We want specific reply from the Government.

ಅಧ್ಯಕ್ಷರು : ಆಯಿತು, ಇವತ್ತು ಉತ್ತರವನ್ನು ಕೊಡಿಸಿಯೇ ಕೊಡಿಸುತ್ತೇನೆ.

11.20 ಪಿಎಂ

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಅ) ಶ್ರೀ ಟಿ. ರಾಜಣ್ಣ (ಕಾರ್ಯದರ್ಶಿ) : ಮಾನ್ಯ ಅಧ್ಯಕ್ಷರೆ, ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿ ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ವಿಧೇಯಕ, 1999ನ್ನು ಸದನದ ಮುಂದಿಡುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು. ಅನುಬಂಧ – I

ಆ) ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು) :– ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ :–

1984ರ ಕರ್ನಾಟಕ ಲೋಕಾಯುಕ್ತ ಅಧಿನಿಯಮ 23(3) ಪ್ರಕರಣದ ಮೇರೆಗೆ :–

1. 1985ರ ಕರ್ನಾಟಕ ಲೋಕಾಯುಕ್ತ ನಿಯಮಗಳ ನಿಯಮ 4ಕ್ಕೆ ತಿದ್ದುಪಡಿ ಮಾಡಿ ದಿನಾಂಕ 21.05.2003ರಂದು ಹೊರಡಿಸಲಾದ ಡಿಪಿಎಆರ್:46:ಎಸ್‌ಎಲ್‌ಯು: 2003ನೇ ಸಂಖ್ಯೆಯ ಅಧಿಸೂಚನೆ;

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ :

2. 1996ರ ಕರ್ನಾಟಕ ಅಬಕಾರಿ ಸೇವೆಗಳು (ನೇಮಕಾತಿ) ನಿಯಮಗಳ ಅನುಸೂಚನೆಗೆ ತಿದ್ದುಪಡಿ ಮಾಡಿ ದಿನಾಂಕ 26.07.2003 ರಂದು ಹೊರಡಿಸಲಾದ ಎಫ್‌ಡಿ:132:ಇಪಿಎಸ್:2002ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

3. ಶಾಸನ ರಚನೆ

ಅ) ವಿಧೇಯಕ ಮಂಡನೆ

(1) ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ವಿಧೇಯಕ, 2003 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಪರವಾಗಿ "2003ನೇ ಕರ್ನಾಟಕ ಸ್ಥಳೀಯ ನಿಧಿ